**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಯಲಬುರ್ಗಾ**

**ಸಿ.ಸಿ. 313/2016**

ಸಾಕ್ಷಿಯ ಹೆಸರು ಃ ಮಳಿಯಪ್ಪ ಪ್ರಾ ಸಾ : 05
ತಂದೆ/ಗಂಡನ ಹೆಸರು : ವೀರುಪಾಕ್ಷಪ್ಪ ಚಾ ಸಾ : 15
ವಯಸ್ಸು : 32 ವರ್ಷ
ವೃತ್ತಿ ಃ ವ್ಯವಸಾಯ
ವಾಸಸ್ಥಳ ಃ ಮುರಡಿ

**ಸಾಕ್ಷಿಗೆ ದಿನಾಂಕಃ 12-08-2022 ರಂದು ಪ್ರಮಾಣ ವಚನ ನೀಡಲಾಯಿತು**

**ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ**

ನಾನು ೨೦೧೬ ನೇ ಸಾಲಿನಲ್ಲಿ ಹೊಮಗಾರ್ಡ ನಾಗಿ ಬೇವೂರನಲ್ಲಿ ಕೆಲಸ ಮಾಡುತ್ತಿದ್ದೇನು.

ದಿನಾಂಕ ೨೦-೦೧-೨೦೧೬ ರಂದು ರಾತ್ರಿ ೧೦.೩೦ ಗಂಟೆಗೆ ನಾನು ಮತ್ತು ಚಾಸಾ-೧೬ ರವರು ರಾತ್ರಿ ಗಸ್ತು ಕರ್ತವ್ಯಕ್ಕೆ ಹೋಗಿದ್ದೇವು. ನಂತರ ಗಸ್ತು ಕರ್ತವ್ಯ ಮುಗಿಸಿಕೊಂಡು ದಿನಾಂಕ ೨೧-೦೧-೨೦೧೬ ರಂದ ಬೆ. ೫.೩೦ ಗಂಟೆ ಸುಮಾರಿಗೆ ಠಾಣೆಗೆ ಬಂದು ವರದಿ ಮಾಡಿರುತ್ತೇವೆ. ಆಗ ಠಾಣೆಯಲ್ಲಿ ಠಾಣಾಧಿಕಾರಿಯಾಗಿ ಚಾಸಾ-೧ ರವರು ಇದ್ದರು. ಆಗ ಚಾಸಾ-೧ ರವರು ನಮಗೆ ಎನ ಹೆಚ್ ೫೦ ರಸ್ತೆಯ ಗುನ್ನಾಳ ಸೀಮಾದಲ್ಲಿ ಒಂದು ಬುಲೇರೋ ವಾಹನ ಪಲ್ಟಿಯಾಗಿ ಬಿದ್ದಿರುತ್ತದೆ. ಹಾಗಾಗೀ ಟ್ರಾಫೀಕ ಜಾಮ್ ಆಗಿರುತ್ತದೆ ಅಲ್ಲಿಗೆ ಹೋಗಬೇಕು ಎಂದು ನಮಗೆ ತಿಳಿಸಿ ನಂತರ ನಾನು , ಚಾಸಾ-೧ ಮತ್ತು ೧೬ , ೧೭ ರವರು ಜೀಪನಲ್ಲಿ ಸ್ಥಳಕ್ಕೆ ಹೋದೇವು. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಜಿ ಎಂ ಆರ

ಕಂಪನಿಯ ಕ್ರೇನ್ ಹಾಗೂ ಹೈವೆ ಅಂಬ್ಯುಲೇನ್ಸ ಜೊತೆಗೆ ಸ್ಥಳಕ್ಕೆ ಬಂದಿದ್ದರು. ನಂತರ ನಾವೆಲ್ಲರೂ ಕ್ರೇನ್ ಮೂಲಕ ರಸ್ತೆಯನ್ನು ಕ್ಲಿಯರ ಮಾಡಿಸುತ್ತಾ ಇದ್ದೇವು ಆಗ ಸಮಯ ಬೆಳಿಗ್ಗೆ ೬.೨೦ ಗಂಟೆ ಆಗಿತ್ತು.

ಆ ಸಮಯದಲ್ಲಿ ಬೆ. ೬.೨೦ ಗಂಟೆಗೆ ಕುಷ್ಟಗಿ ಕಡೆಯಿಂದ ಒಬ್ಬ ಲಾರಿ ಚಾಲಕ ತನ್ನ ಲಾರಿಯನ್ನು ಅತೀವೇಗ ಹಾಗೂ ಅಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ಈಗಾಗಲೇ ಅಪಘಾತವಾಗಿದ್ದ ಬುಲೇರೋ ವಾಹನಕ್ಕೆ ಡಿಕ್ಕಿ ಪಡಿಸಿ ಅಲ್ಲೆ  ನಿಂತಿದ್ದ ನನಗೆ ಹಾಗೂ ಜಿ ಎಂ ಆರ ಕಂಪನಿಯ ಸಿಬ್ಬಂದಿಯವರಿಗೆ ಡಿಕ್ಕಿ ಪಡಿಸಿದ್ದರಿಂದ ಪೆಟ್ಟಾಗಿರುತ್ತದೆ.  ಡಿಕ್ಕಿ ಪಡಿಸಿದ ಪರಿಣಾಮ ಬುಲೇರೋ ವಾಹನದಲ್ಲಿದ್ದ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ ಹಾಗು ಇನ್ನೊಬ್ಬ ವ್ಯಕ್ತಿಗೆ ಗಾಯಗಳಾಗಿರುತ್ತವೆ.  ನಂತರ ಅಂಬ್ಯುಲೆನ್ಸ ಚಾಲಕನಿಗು ಸಹ ಸದರಿ ಅಪಘಾತದಲ್ಲಿ ಪೆಟ್ಟಾಗಿರುತ್ತದೆ.    ಅಪಘಾತದಲ್ಲಿ ಬುಲೇರೊ ಮುಂದೆ ನಿಂತಿದ್ದ ಎ ಎಸ ಐ ಅಮೀನಸಾಬ ರವರಿಗೆ ಕ್ರೇನ ಬಡಿದು ಕೆಳಗಡೆ ಬಿದ್ದು ಅಮೀನಸಾಬ ರವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ.   ಸದರಿ ಅಪಘಾತದಲ್ಲಿ ಚಾಸಾ-೧ ರವರ ಕಾಲು ಮುರಿದು ಹೋಗಿದ್ದು , ಚಾಸಾ-೧೭ ರವರ ಕೈ ಮುರಿದು ಹೋಗಿದ್ದು, ಜಿ ಎಂ ಆರ ಸಿಬ್ಬಂದಿಗಳ ಕಾಲುಗಳಿಗೆ ಪೆಟ್ಟಾಗಿತ್ತು.

ಅಪಘಾತದಲ್ಲಿ ಗಾಯಗೊಂಡ ನನ್ನನ್ನು ಹಾಗೂ ಚಾಸಾ-೧೬ ಹಾಗೂ ೧೭ ರವರನ್ನು ಇಲಕಲ್‌ನ ಮಹಾಂತೇಶ ಅಕ್ಕಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ.   ನಂತರ ಎರಡು ದಿನಗಳ ನಂತರ ಪೋಲೀಸರು ಅಪಘಾತದ

ವಿಚಾರವಾಗಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ಇಂದು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು ಆರೋಪಿ ಗುರುತಿಸುವಿಕೆಗೆ ತಕಾರರನ್ನು ಸೂಚಿಸಿರುವುದಿಲ್ಲ. ಈ ವಿಚಾರವನ್ನು ಹೊರತು ಪಡಿಸಿ ನಾನು ಪೋಲೀಸರಿಗೆ ಬೇರೆ ಯಾವುದೇ ಹೇಳಿಕೆ ನೀಡಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದರು , ನೀಡಲಾಯಿತು)**

**ಪಾಟೀಸವಾಲುಃ ಸ.ಸ.ಅ ರವರಿಂದ**

ದಿನಾಂಕ ೨೦-೦೧-೨೦೧೬ ರಂದು ಚಾಸಾ-೧ , ನಾನು , ಚಾಸಾ-೧೬ , ೧೭ ರವರು ಠಾಣೆಯಿಂದ ಘಟನಾ ಸ್ಥಳಕ್ಕೆ ಹೊರಟಾಗ ಚಾಸಾ-೧ ರವರು ಠಾಣೆಯ ಉಸ್ತುವಾರಿಯನ್ನು ಶಂಕರ ನಾಯ್ಕ ರವರಿಗೆ ವಹಿಸಿಕೊಟ್ಟು ಹೋಗಿದ್ದರು ಎಂದರೆ ಸರಿ. ನಮ್ಮ ಜೊತೆ ಮೃತ ಅಮೀನಸಾಬ ರವರು ಸಹ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ . ಸ್ಥಳಕ್ಕೆ ಹೋದಾಗ ನಮ್ಮ ಜೀಪ್ ಚಾಲಕ ಚಾಸಾ-೧೮ ರವರು ಜೀಪ್ ನ್ನು ರಸ್ತೆಯ ಸೈಡಗೆ ನಿಲ್ಲಿಸಲು ಮುಂದೆ ಹೋದರು ಎಂದರೆ ಸರಿ. ಬುಲೇರೋ ಕುರಿಗಳನ್ನು ತುಂಬಿಕೊಂಡಿದ್ದು ಜಿ. ಎಂ ಆರ ಸಿಬ್ಬಂದಿಗಳು ಕುರಿಗಳನ್ನು ತಗೆಯುತ್ತಿದ್ದರು. ಆಗ ನಾವು ಹಾಗೂ ಜಿ ಎಂ ಆರ ಸಿಬ್ಬಂದಿಗಳು ರಸ್ತೆಯ ಸುರಕ್ಷತೆಗಾಗಿ ಸ್ಥಳ ಸುತ್ತ ಟ್ರಾಫೀಕ ಕೋನಗಳನ್ನು ಇಟ್ಟು ನಾವೆಲ್ಲರೂ ಟ್ರಾಫೀಕ ರಿಫ್ ಲೆಕ್ಟರಗಳನ್ನು ಹಾಕಿಕೊಂಡು ರಸ್ತೆಯ ಮೇಲೆ ನಿಂತಿದ್ದ ಬುಲೋರೊ

ವಾಹನವನ್ನು ಕ್ರೇನ ಸಹಾಯದಿಂದ ತಗೆಯುತ್ತಿದ್ದೇವು ಎಂದರೆ ಸರಿ . ಆಗ ಚಾಸಾ-೧ ಹಾಗೂ ೧೭ ರವರು ಕ್ರೆನ ಬಲಭಾಗದಲ್ಲಿ ರಸ್ತೆಯ ಡಿವೈಡರ ಹತ್ತಿರ ಇದ್ದರು ಎಂದರೆ ಸರಿ. ಎ ಎಸ ಐ ಅಮೀನಸಾಬ ರವರು ಕ್ರೇನ ನ ಮುಂಭಾಗದಲ್ಲಿ ಇದ್ದರು ಎಂದರೆ ಸರಿ. ಜಿ ಎಂ ಆರ ಕಂಪನಿಯ ಸಿಬ್ಬಂದಿ ಚಾಸಾ-೧೮ , ೨೦, ೨೧ ರವರು ಅಪಘಾತವಾಗಿ ಬಿದ್ದ ವಾಹನದ ಹತ್ತಿರ ರಸ್ತೆಯ ಡಿವೈಡರ ಹತ್ತಿರ ಇದ್ದರು ಎಂದರೆ ಸರಿ.

ಚಾಸಾ-೨೪ , ೨೬, ೨೭ ರವರು ಬಿದ್ದ ಬುಲೇರೋ ಮುಂದೆ ಮತ್ತು ಎಡಭಾಗದಲ್ಲಿ ನಿಂತುಕೊಂಡು ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ ವಾಹನವನ್ನು ಕ್ರೇನ ಸಹಾಯದಿಂದ ತಗೆಯುತ್ತಿದ್ದರು ಎಂದರೆ ಸರಿ. ಲಾರಿ ಚಾಲಕನು ತನ್ನ ಲಾರಿಯನ್ನು ಸಿಗ್ನಲ ಕೋನಗಳನ್ನು ಲೆಕ್ಕಿಸಿದೆ ಪಲ್ಟಿ ಯಾದ ವಾಹನಕ್ಕೆ ಜೋರಾಗಿ ಡಿಕ್ಕಿ ಪಡಿಸಿದರು ಎಂದರೆ ಸರಿ. ಆಗ ಸುತ್ತಮುತ್ತಲು ನಿಂತಿದ್ದ ನಮಗೆ ಬುಲೇರೋ ವಾಹನ ಬಡಿದು ಗಾಯವಾಗಿರುತ್ತದೆ ಎಂದರೆ ಸರಿ. ಸದರಿ ಲಾರಿ ಚಾಲಕ ವೇಗವಾಗಿ ಬಂದು ಬುಲೇರೋ ವಾಹನಕ್ಕೆ ಡಿಕ್ಕಿ ಪಡಿಸಿದ್ದರಿಂದ ಬುಲೇರೋ ವಾಹನ ಕ್ರೇನಗೆ ಬಡಿದುದ ಕ್ರೇನ ಮುಂದೆ ಹೋಯಿತು ಎಂದರೆ ಸರಿ . ಆಗ ಕ್ರೇನ ಮುಂದೆ ನಿಂತಿದ್ದ ಅಮೀನಸಾಬ ರವರಿಗೆ ಕ್ರೇನ ಬಡಿದು ಅವರು ಕೆಳಗೆ ಬಿದ್ದು ಕ್ರೇನ ಮುಂದಿನ ಗಾಲಿ ಅಮೀನಸಾಬರವರ ಮೇಲೆ ಹತ್ತಿದ್ದರಿಂದ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದರೆ ಸರಿ.

ಕ್ರೇನ ಪಕ್ಕ ನಿಂತಿದ್ದ ಚಾಸಾ-೧ ರವರಿಗೆ ಎಡಗಾಲ ಮೊಣಕಾಲ ಕೆಳಗೆ ಭಾರಿ ರಕ್ತ ಗಾಯವಾಗಿತ್ತು ಎಂದರೆ ಸರಿ. ಬುಲೇರೋ ವಾಹನದ ಚಾಲಕ ಮಹಿಬೂಬ ಕೊರ್ಬೋ ಬುಲೇರೋ ವಾಹನದಲ್ಲಿ ಸಿಕ್ಕಿ ಹಾಕಿಕೊಂಡು ತಲೆಗೆ ಮೈಗೆ ಭಾರಿ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿ . ಮಹಿಬೂಬ ರವರಿಗೆ ಎರಡು ಕಾಲು ಹಾಗೂ ಯಾಸೀನರವರಿಗೆ ತಲೆಗೆ ಭಾರಿ ಗಾಯವಾಗಿತ್ತು ಎಂದರೆ ಸರಿ. ಕ್ರೇನ ಆಪರೇಟರ ಚಾಸಾ-೨೪ ರವರಿಗೆ ಎಡಗಾಲಪಾದ ಹತ್ತಿರ ಭಾರಿ ಗಾಯವಾಗಿದ್ದು ಹಾಗೂ ಜಿ ಎಂ ಆರ ಕಂಪನಿಯ ಸಿಬ್ಬಂದಿ ಚಾಸಾ-೨೨ ರವರಿಗೆ ಎಡಗೈ ಹೆಬ್ಬಳಿನ ಹತ್ತಿರ ಹಾಗೂ ತಲೆಯ ಮುಂಭಾಗಕ್ಕೆ ರಕ್ತಗಾಯವಾಗಿತ್ತು ಎಂದರೆ ಸರಿ. ಚಾಸಾ-೧೮ ರವರಿಗೆ ಎಡಕಾಲಿಗೆ ಭಾರಿ ರಕ್ತಗಾಯವಾಗಿತ್ತು ಎಂದರೆ ಸರಿ. ಚಾಸಾ-೨೧ ರವರೆಗ ಸಣ್ಣ ಪುಟ್ಟ ಒಳಪೆಟ್ಟು ಆಗಿತ್ತು ಎಂದರೆ ಸರಿ. ಸದರಿ ಅಪಘಾತದಲ್ಲಿ ಚಾಸಾ-೧೯ , ೨೦ , ೨೩ ರವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದರೆ ಸರಿ. ನಂತರ ವಿಚಾರ ತಿಳಿದು ಚಾಸಾ-೧೪ ರವರು ಹಾಗೂ ಅಪಘಾತದಲ್ಲಿ ಗಾಯಗೊಳ್ಳದ ಸಾಕ್ಷಿದಾರರು ನಮ್ಮನ್ನು ಉಪಚರಿಸಿದರು ಎಂದರೆ ಸರಿ. ನಂತರ ನಾನು ಅಪಘಾತಪಡಿಸಿದ ಲಾರಿ ಸಂಖ್ಯೆ ನೋಡಲಾಗಿ ಲಾರಿ ಸಂ. ಟಿಎನ್ ೫೨-ಎ-೮೮೮೪ ಆಗಿತ್ತು ಎಂದರೆ ಸರಿ. ಆರೋಪಿಯ ಹೆಸರು ಅನಬಳಗನ್ ಎಂದು ಗೊತ್ತಾಯಿತು ಎಂದರೆ ಸರಿ . ನಂತರ ಬುಲೇರೋ ವಾಹನದ ನಂಬರ ನೋಡಲಾಗಿ ಕೆಎ-೨೮-ಬಿ-೬೩೩೪ ಆಗಿತ್ತು ಎಂದರೆ ಸರಿ. ಸ್ಥಳದಲ್ಲಿದ್ದ ಕ್ರೇನ ನಂ. ಎಪಿ-೧೧/ಡಿ-೯೬೩೩ ಆಗಿತ್ತು ಎಂದರೆ ಸರಿ. ನಂತರ

ಪಿ.ಎಸ ಐ ರವರಿಗೆ ಮಾಹಿತಿ ನೀಡಿ ಅವರು ಸ್ಥಳಕ್ಕೆ ಬಂದು ಚಾಸಾ-೧ ರವರ ಹೇಳಿಕೆ ಪಡೆದು ಗಾಯಗೊಂಡ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು ಮಾ-೧ ರಿಂದ ೫ ಹಾಗೂ ಮು ಮಾ-೧(ಎ) ಮತ್ತು ೧(ಬಿ) ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನಾನು ಈಗ ೨ ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೇನೆ. ನನ್ನನ್ನು ಹೋಮಗಾರ್ಡ ನಾಗಿ ಯಾವುದೇ ಅಧಿಕೃತ ನೇಮಕ ಮಾಡಿಲ್ಲ. ತಿಂಗಳಿಗೆ ಇಷ್ಟೆ ಕೆಲಸ ಮಾಡಬೇಕು ಎಂದು ನಿಖರವಾಗಿ ಹೇಳಿರುವುದಿಲ್ಲ ನಮಗೆ ಕೆಲಸಕ್ಕೆ ಸೂಚಿಸಿದ್ದಾಗ ಹೋಗಿರುತ್ತೇವೆ. ನಾನು ಜನವರಿ ತಿಂಗಳಿಲ್ಲಿ ಒಂದು ತಿಂಗಳು ಪೂರ್ತಿ ಕೆಲಸ ಮಾಡಿರುತ್ತೇನೆ. ಮೇನ್ ಬಜಾರ , ಪೋಸ್ಟ ಆಫೀಸ್ , ಬ್ಯಾಂಕ , ಶಾಲಾ ಕಾಲೇಜ ಹತ್ತಿರ ನಾನು ದಿನಾಂಕ ೨೦-೦೧-೨೦೧೬ ರಂದು ಚಾಸಾ-೧೬ ರವರೊಂದಿಗೆ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇನೆ. ಬೆಳಿಗ್ಗೆ ೫.೩೦ ಗಂಟೆಗೆ ಚಾಸಾ-೧ ರವರು ನಮ್ಮನ್ನು ಠಾಣೆಗೆ ಕರೆಸಿರುತ್ತಾರೆ. ನಾವು ಠಾಣೆ ಬಿಟ್ಟಾಗ ಬೆ, ೫.೪೫ ಗಂಟೆ ಆಗಿತ್ತು. ಅಪಘಾತ ಸ್ಥಳಕ್ಕೆ ಹೋದಾಗ ಬೆ. ೬.೧೫ -೨೦ ನಿಮಿಷ ಆಗಿತ್ತು. ಬೇವೂರಿನಿಂದ ಬುಲೇರೊ ಅಪಘಾತಕ್ಕೆ ಇಡಾದ ಸ್ಥಳ ೮ ಕಿ.ಮಿ ಅಂತರದಲ್ಲಿದೆ. ಬುಲೇರೋ ವಾಹನದಲ್ಲಿ ೪-೫ ಜನ ಇದ್ದರು. ಬುಲೇರೋ ವಾಹನದಲ್ಲಿದ್ದ ಜನರ ಹೆಸರು ನನಗೆ ನೆನಪಿಲ್ಲ. ಬುಲೆರೋ ವಾಹನದ ಚಾಲಕನ ಹೆಸರು ಗೊತ್ತಿಲ್ಲ.

ಬುಲೇರೋ ವಾಹನ ಬಿದ್ದು ಎಷ್ಟು ಹೊತ್ತಾಗಿತ್ತು ಎಂದು ನನಗೆ ಗೊತ್ತಿಲ್ಲ. ಬುಲೇರೋ ವಾಹನದಲ್ಲಿ ಚಾಲಕ ಇದ್ದನು. ಸ್ಥಳದಲ್ಲಿ ಜಿ ಎಂ ಆರ ಕಂಪನಿಯ ೫-೬ ಜನ ಇದ್ದರು. ಕ್ರೇನ ಚಾಲಕನ ಹೆಸರು ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ಹೈವೆ ಅಂಬ್ಯುಲೇನ್ಸ ಸ್ಥಳದಲ್ಲಿ ಇತ್ತು . ನನಗೆ ಹೈವೆ ಅಂಬ್ಯುಲೇನ್ಸ ಚಾಲಕನ ಹೆಸರು ಗೊತ್ತಿಲ್ಲ.

ಬುಲೇರೋ ವಾಹನವು ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಬಿದ್ದಿತ್ತು. ಬುಲೇರೊ ವಾಹನದಲ್ಲಿದ್ದ ೬-೮ ಕುರಿಗಳು ಸತ್ತುಬಿದ್ದಿದ್ದು ಹಾಗೂ ೮-೧೦ ಕುರಿಗಳು ಕೆಳಗೆ ಬಿದಿದ್ದವು. ನಾವು ಸ್ಥಳಕ್ಕೆ ಹೋಗಿ ಬೆ. ೬.೩೦ ಗಂಟೆಗೆ ಕ್ರೇನ ಸಹಾಯದಿಂದ ಕೆಲಸ ಮಾಡುತ್ತಿದ್ದೇವು. ಬುಲೆರೋ ವಾಹನವನ್ನು ಮೇಲಕ್ಕೆ ಎತ್ತುವಾಗ ನಮ್ಮ ಸಹಾಯ ಬೇಕಾಗಿಲ್ಲ , ಕ್ರೇನ ಸಹಾಯದಿಂದ ಎತ್ತಬಹುದು ಎಂದರೆ ಸರಿ. ಸದರಿ ಕ್ರೇನ ಹೋಸಪೇಟೆ ಕಡೆಗೆ ಮುಖ ಮಾಡಿ ನಿಂತಿತ್ತು. ಕ್ರೇನ ಚಾಲಕ ಸ್ಥಳದಲ್ಲಿ ಬಿದಿದ್ದ ಬುಲೇರೋವನ್ನು ಕ್ರೇನ ಸಹಾಯದಿಂದ ಮೇಲಕ್ಕೆ ಎತ್ತುತ್ತಿದ್ಧ, ಆ ಸಮಯದಲ್ಲಿ ನಾವುಗಳು ದೂರದಲ್ಲಿ ನಿಂತುಕೊಂಡಿದ್ದೇವು ಎಂದರೆ ಸರಿ.

ಮು ಮಾ-೨(ಎ) ಮತ್ತು (ಬಿ) ಯನ್ನು ಕುಷ್ಟಗಿ ಕಡೆಯ ರಸ್ತೆಯ ಮೇಲೆ ಇಟ್ಟಿದ್ದರು. ಬುಲೇರೋ ವಾಹನದ ೧೦೦ ಮೀಟರ ಅಂತರದಲ್ಲಿ ಮು ಮಾ-೨(ಎ) ಮತ್ತು (ಬಿ) ಯನ್ನು ಇಡಲಾಯಿತು. ಕುಷ್ಟಗಿ ಹೋಸಪೇಟೆ ರಾಷ್ಟಿಯ ಹೆದ್ದಾರಿಯ ರಸ್ತೆಯ ಡಿವೈಡರ ೮-೧೦ ಅಡಿ ಅಂತರದಲ್ಲಿ ಇದೆ ಎಂದರೆ ಸರಿ. ಸದರಿ ರಾಷ್ಟೀಯ ಹೆದ್ದಾರಿಯಲ್ಲಿ ಯಾವುದಾದರೂ ಒಂದು ಹಳ್ಳಿ ಬಂದಾಗ ಸದರಿ

ವಿಬಜಕವನ್ನು ಕೂಡಿಸುತ್ತಾರೆ ಎಂದರೆ ಸರಿ. ಕುಷ್ಟಗಿ ರಸ್ತೆಯ ಕಡೆಗೆ ೧ ಕಿ.ಮಿ ಅಂತರದಲ್ಲಿ ವಿಭಜಕ ಇತ್ತು. ಮು ಮಾ-೨(ಎ) ಮತ್ತು (ಬಿ)ಯನ್ನು ಅರ್ಧ ಕಿ.ಮಿ ದೂರದಲ್ಲಿ ಇಟ್ಟಿದ್ದರು ಬುಲೇರೋ ವಾಹನದ ಅರ್ಧ ಕಿ.ಮಿ ದೂರದಲ್ಲಿ ಮು ಮಾ ೨(ಎ) ಮತ್ತು(ಬಿ) ಇಟಪ್ಪಿದ್ದರು ಅದು ಆದ ಅರ್ಧ ಕಿ.ಮಿ ನಂತರ ವಿಭಜಕ ಬರುತ್ತದೆ ಎಂದರೆ ಸರಿ . ಸದರಿ ವಿಭಜಕರದ ಹತ್ತಿರ ಯಾರಾದರು ಸಿಬ್ಬಂದಿಗಳು ಇದ್ದರೊ ಇಲ್ಲವೊ ನನಗೆ ಗೊತ್ತಿಲ್ಲ.

ಮು ಮಾ ೧(ಎ) ಮತ್ತು(ಬಿ) ಯನ್ನು ಬುಲೇರೋ ವಾಹನದ ೨೦ ಅಡಿ ದೂರದಲ್ಲಿ ಇಟ್ಟಿದ್ದರು. ಮು ಮಾ ೧ ಮತ್ತು ೨ ನ್ನು ಜಿ ಎಂ ಆರ ಕಂಪನಿಯ ಸಿಬ್ಬಂದಿಗಳು ತಗೆದುಕೊಂಡು ಬಂದಿರುತ್ತಾರೆ. ಎಷ್ಟು ಹೊತ್ತಿಗೆ ತಗೆದುಕೊಂಡು ಬಂದಿರುತ್ತಾರೆ ನನಗೆ ಗೊತ್ತಿಲ್ಲ. ಮು ಮಾ ೧(ಎ) ಮತ್ತು(ಬಿ) ಹಾಗೂ ಮು ಮಾ ೨(ಎ) ಮತ್ತು(ಬಿ) ಗಳ ಮೇಲೆ ಒಡೆದ ಗುರುತುಗಳು ಇಲ್ಲ ಎಂದರೆ ಸರಿ ಸಾಕ್ಷಿ ತರಚಿದ ಗುರುತುಗಳು ಇವೆ ಎಂದು ನುಡಿಯುತ್ತಾರೆ. ಮು ಮಾ ೧ ಮತ್ತು ೨ ಪ್ಲಾಸ್ಟಿಕನ ಕೋನಗಳು ಎಂದರೆ ಸರಿ. ಮು ಮಾ ೧ ಮತ್ತು ೨ ರ ಮೇಲೆ ಯವೂದೇ ತರಚಿದ ಗುರುತುಗಳು ಕಂಡುಬರುತ್ತಿಲ್ಲ ಎಂದರೆ ಸರಿಯಲ್ಲ. ಮು ಮಾ-೩ ನ್ನು ಅಪಘಾತ ಸ್ಥಳದಲ್ಲಿ ಯಾರು ತಂದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಮ ಮಾ-೩ ನ್ನು ನಾವು ಮೂರು ಜನ ಹಾಗೂ ಜಿ ಎಂ ಆರ ಕಂಪನಿಯ ೪-೫ ಜನ ಸಿಬ್ಬಂದಿಗಳು ಧರಿಸಿದ್ದೇವು. ಮು ಮಾ-೪ ಮೃತ ಅಮೀನಸಾಬ ರವರಿಗೆ ಸೇರಿದ್ದು.

ಕುಷ್ಟಗಿ ಕಡೆಯಿಂದ ಲಾರಿಯು ಎಷ್ಟು ವೇಗದಲ್ಲಿ ಬರುತ್ತಿತ್ತು ಎಂದು ನಾನು ನೋಡಿಲ್ಲ. ಅಪಘಾತಪಡಿಸಿದ ರಭಸಕ್ಕೆ ನನಗೆ ಗೊತ್ತಾಯಿತ್ತು. ಚಾಸಾ-೧ ರವರು ಬುಲೆರೋ ವಾಹನದ ಪಶ್ಚಿಮ ದಿಕ್ಕಿಗೆ ನಿಂತಿರಬಹುದು. ಮೃತ ಅಮೀನಸಾಬ ರವರು ದಕ್ಷಿಣ ಭಾಗಕ್ಕೆ ನಿಂತಿದ್ದರು. ನಾನು ಹಾಗೂ ಚಾಸಾ-೧೬ ರವರು ಡಿವೈಡರ ಮೇಲೆ ನಿಂತಿದ್ದೇವು. ಜಿ ಎಂ ಆರ ಸಿಬ್ಬಂದಿಗಳು ರಸ್ತೆಯ ಮದ್ಯ ಭಾಗದಲ್ಲಿ ನಿಂತಿದ್ದರು. ಬುಲೇರೋ ಅಪಘಾತವಾದ ಸ್ಥಳದಲ್ಲಿ ೨೦ ಜನರು ಇದ್ದರು. ನನಗೆ ಅಲ್ಲಿ ನೇರದಿದ್ದ ಜನರು ಹೆಸರು ಗೊತ್ತಿಲ್ಲ. ಕ್ರೇನ ಮುಖಾಂತರ ಬುಲೇರೋ ವಾಹನವನ್ನು ಎತ್ತುವಾಗ ಕ್ರೇನ ಅತೀ ವೇಗವಾಗಿ ಮುಂದಕ್ಕೆ ಚಲಿಸಿ ಅಪಘಾತವಾಗಿರುತ್ತದೆ ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಕ್ರೇನ ಚಾಲಕ ಜೋರಾಗಿ ಕ್ರೇನ ಚಲಾಯಿಸುತ್ತಿದ್ದಾಗ ಕ್ರೇನನ ಗಾಲಿ ಅಮೀನಸಾಬ ರವರ ಮೇಲೆ ಹರಿದು ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಬುಲೇರೋ ವಾಹನವನ್ನು ಮೇಲಕ್ಕೆ ಎತ್ತುತ್ತಿದ್ದಾಗ ಬುಲೇರೋ ವಾಹನ ಬಡಿದು ಚಾಸಾ-೧ , ೧೭ , ೧೮, ೨೨ ರವರಿಗೆ ಹಾಗೂ ನನಗೆ ಚಾಸಾ-೧೬ ರವರಿಗೆ ಹಾಗೂ ಇತರರಿಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ.

ಬುಲೇರೋ ವಾಹನ ರಸ್ತೆಯ ಪೂರ್ವ ದಿಕ್ಕಿನಲ್ಲಿ ಪಲ್ಟಿ ಯಾಗಿ ಬಿದಿದ್ದರಿಂದ ಕುಷ್ಟಗಿ ಕಡೆಯಿಂದ ಬರುತ್ತಿದ್ದ ವಾಹನಗಳು ಪಶ್ಚಿಮ ದಿಕ್ಕಿನ ಹೊಸಪೇಟೆ ರಸ್ತೆಯ ಕಡೆಗೆ ಹೋಗುತ್ತಿದ್ದವು ಎಂದರೆ ಸರಿಯಲ್ಲ. ಸದರಿ ದಿನ ವಾಹನಗಳು ಪೂರ್ವ ದಿಕ್ಕಿನ ರಸ್ತೆಯಲ್ಲಿಯೇ ಬರುತ್ತಿದ್ದವು. ಸದರಿ ರಸ್ತೆ ರಾಷ್ಟಿಯ ಹೆದಾದ್ದರಿ ಆಗಿದ್ದರಿಂದ

ಸಾಕಷ್ಟು ದಟ್ಟನೆ ಇದೆ ಎಂದರೆ ಸರಿ. ಸದರಿ ಸಮಯದಲ್ಲಿ ೨೦-೩೦ ಲಾರಿಗಳು ಕುಷ್ಟಗಿ ಹೊತಪೇಟೆ ರಸ್ತೆಯ ಪೂರ್ವದ ರಸ್ತೆಯ ಮೇಲಿಂದ ಹೋಗುತ್ತಿದ್ದು , ನನಗೆ ಲಾರಿಗಳ ಸಂಖ್ಯೆ ಹಾಗೂ ಅದು ಯಾವ ರಾಜ್ಯಕ್ಕೆ ಸೇರಿದ್ದು ಎಂದು ಗೊತ್ತಿಲ್ಲ. ಸದರಿ ದಿನ ಅಪಘಾತಪಡಿಸಿದ ಎನ್ನಲಾದ ಲಾರಿ ಎಷ್ಟನೇ ಲಾರಿ ಆಗಿತ್ತು ಗೊತ್ತಿಲ್ಲ. ನನಗೆ ಅಪಘಾತಪಡಿಸಿದ ಲಾರಿಯ ಸಂಖ್ಯೆ ನಿಖರವಾಗಿ ಗೊತ್ತಿಲ್ಲ. ಆದರೆ ಅದು ತಮೀಳನಾಡು ರಾಜ್ಯಕ್ಕೆ ಸೇರಿದ್ದು ಎಂದು ಗೊತ್ತಿತ್ತು.

ನಾನು ಚಾಸಾ-೧೬ ಹಾಗೂ ೧೭ ರವರು ಅಂಬುಲೆನ್ಸನಲ್ಲಿ ಆಸ್ಪತ್ರೆಗೆ ಹೋಗಿರುತ್ತೆವೆ. ಚಾಸಾ-೧ ರವರು ಬೇರೆ ಆಸ್ಪತ್ರೆಗೆ ಹೋಗಿರುತ್ತಾರೆ ಅವರು ಯಾವ ವಾಹನದಲ್ಲಿ ಹೋಗಿರುತ್ತಾರೆ ನನಗೆ ಗೊತ್ತಿಲ್ಲ. ಚಾಸಾ-೨೨ ರವರು ಯಾವ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿರುತ್ತಾರೆ ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ ಎರಡು ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಪೋಲೀಸರಿಗೆ ನಾನು ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ. ನಾನು ಹೇಳಿಕೆ ನೀಡಿದಾಗ ಎಷ್ಟು ಸಮಯವಾಗಿತ್ತು ನನಗೆ ನೆನಪಿಲ್ಲ. ನನ್ನ ಹೇಳಿಕೆಯನ್ನು ಎ. ಎಸ ಐ ಶಂಕರ ನಾಯ್ಕ ರವರು ದಾಖಲಿಸಿಕೊಂಡಿರುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಜಿ ಎಂ ಆರ ಸಿಬ್ಬಂದಿಗಳು ಹೆಸರುಗಳು ಬರೆಸಿದ್ದೇನು ಇಲ್ಲವೋ ನನಗೆ ನೆನಪಿಲ್ಲ. ಅಂಬ್ಯುಲೇನ್ಸ ಚಾಲಕನ ಹೆಸರು ನಾನು ಹೇಳಿಲ್ಲ. ಜಿ ಎಂ ಆರ ಕಂಪನಿಯ ಪೇಟ್ರೋಲಿಂಗ ಯಾರು ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಬುಲೇರೋ ವಾಹನದ ಚಾಲಕನ ಹೆಸರು, ವಾಹನದ ಸಂಖ್ಯೆ ಹಾಗೂ ಕ್ರೇನ ಸಂಖ್ಯೆ ನಾನು ಹೇಳಿ ಬರೆಸಿಲ್ಲ. ನನಗೆ ಲಾರಿ

ಚಾಲಕನ ಹೆಸರು , ತಂದೆ ಹೆಸರು ಹಾಗೂ ಆತ ಯಾವ ಊರಿನವನು ಎಂದು ನಾನು ಹೇಳಿಕೆಯಲ್ಲಿ ಹೇಳಿಲ್ಲ. ಸದರಿ ದಿನ ಕ್ರೇನ ಬಳಸುತ್ತಿದ್ದ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಲಾರಿ ಚಾಲಕನ ತಪ್ಪಿನಿಂದ ಅಪಪಘಾತವಾಗಿಲ್ಲ ಎಂದರೆ ಸರಿಯಿಲ್ಲ. ಸ್ಥಳದಲ್ಲಿ ಬುಲೇರೋ ವಾಹನ ಹಾಗೂ ಕ್ರೇನ ನಡುವೆ ಅಪಘಾತ ಸಂಬಂವಿಸಿರುತ್ತದೆ ಎಂದರೆ ಸರಿಯಲ್ಲ. ಬುಲೇರೋ ವಾಹನದ ಚಾಲಕನಿಗೆ ಚಾಲನಾ ಪತ್ರ ಹಾಗೂ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕ್ರೇನ ಚಾಲನೆ ಮಾಡಲು ಚಾಲಕನಿಗೆ ಯಾವುದೇ ಪ್ರಮಾಣ ಪತ್ರ ಹಾಗೂ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಹನಗಳಿಗೆ ಪರವಾನಿಗೆ ಹಾಗೂ ವಿಮೇ ಇಲ್ಲದೇ ಇದ್ದುದ್ದರಿಂದ ಅಪಘಾತದ ಪರಿಹಾರ ಪಡೆಯಲು ಲಾರಿ ಚಾಲಕನ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಾಹನಕ್ಕೆ ವಿಮೆ ಹಾಗೂ ಆತನಿಗೆ ಚಾಲನಾ ಪರವಾನಿಗೆ ಇದ್ದು ಅಪಘಾತದ ಪರಿಹಾರ ಪಡೆಯಲು ವಿನಾಕಾರಣ ಆತನ ಲಾರಿಯನ್ನು ಪ್ರಕರಣದಲ್ಲಿ ಸಿಲುಕಿಸಿ ನಾವೇಲ್ಲರೂ ಪೋಲೀಸ ಇಲಾಖೆಯ ಸಿಬ್ಬಂದಿಗಳಾಗಿದ್ದರಿಂದ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಾಗುವಂತೆ ನೋಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ತನ್ನ ವಾಹನವನ್ನು ವೇಗವಾಗಿ ಚಲಾಯಿಸುತ್ತಿರಲ್ಲಿ ಹಾಗೂ ಯಾವುದೇ ಅಪಘಾತ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾದಲ್ಲಿ ಅಮೀನಸಾಬರವರು ಮೃತಪಟ್ಟಿಲ್ಲ , ಚಾಸಾ-೧ ಹಾಗೂ ಇತರೆ ಸಾಕ್ಷಿದಾರರಿಗೆ ಹಾಗೂ ನನಗೆ ಗಾಯವಾಗಿಲ್ಲ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ , ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ನಾನು ನಮ್ಮ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಯಲಬುರ್ಗಾ